**ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 7018/2022

ಪಿ.ಡಬ್ಲ್ಯೂ : 5 ಸಿ.ಡಬ್ಲ್ಯೂ 5

| | | |
|---|---|---|
| ಸಾಕ್ಷಿದಾರರ ಹೆಸರು | : | ರೇಣುಕಾ ಸಾಸಾಬಾಳ |
| ತಂದೆಯ ಹೆಸರು | : | ಲಕ್ಷ್ಮಣ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ನಿವಾಳಖೇಡ |
| ಸಮಯ | : | 4.15 |

ಸಾಕ್ಷಿಗೆ ಇಂದು ದಿನಾಂಕಃ 14.11.2025 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ಚಾ ಸಾ 1 ನನ್ನ ಗಂಡ. ಚಾ ಸಾ 4 ನನ್ನ ಬಾವ. ಚಾ ಸಾ 6 ರಿಂದ 8 ರವರ ಪರಿಚಯ ಇಲ್ಲ.

3 ವರ್ಷಗಳ ಹಿಂದೆ ನಾನು ಚಾ ಸಾ 1,4 ರವರು ದೇವರ ಹಿಪ್ಪರಗಿಗೆ ಗೃಹ ಪ್ರವೇಶಕ್ಕಾಗಿ ಹೋಗಿರುತ್ತೇವೆ. ಗೃಹ ಪ್ರವೇಶ ಮುಗಿಸಿಕೊಂಡು ನಾವು ವಾಪಸ್ ಬರುವಾಗ ಬಸ್ ನಿಲ್ದಾಣದ ಹತ್ತಿರ ರಸ್ತೆ ಬದಿಯಿಂದ ಹೋಗುತ್ತಿರುವ ಚಾ ಸಾ 4 ರವರಿಗೆ ವಿಜಯಪುರದ ಕಡೆಯಿಂದ ಒಂದು ಬಿಳಿ ಬಣ್ಣದ ಕಾರ ಬಂದು ಚಾ ಸಾ 4 ರವರ ಬಲಗಡೆ ಭಾಗಕ್ಕೆ ಡಿಕ್ಕಿಪಡಿಸಿರುತ್ತದೆ. ಅಪಘಾತದಲ್ಲಿ ಸದರಿಯವರ ಕೈ, ಕಾಲು, ಪೆಟ್ಟಾಗಿರುತ್ತದೆ. ನಂತರ ಚಾ ಸಾ 4 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ವಾಹನ ಹೇಗೆ ಬರುತ್ತಿತ್ತು ನಾನು ನೋಡಿಲ್ಲ, ನಾನು

ಬರುವಷ್ಟರಲ್ಲಿ ಅಪಘಾತವಾಗಿತ್ತು ಆಗ ಸಮಯ ಸಾಯಂಕಾಲ 4.30 ಗಂಟೆ ಆಗಿತ್ತು. ನಂತರ ಚಾ ಸಾ 4 ರವರನ್ನು ಆ್ಯಂಬಲೇನ್ಸ ಮೂಲಕ ವಿಜಯಪುರದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಕಾರಿನ ಚಾಲಕನನ್ನು ನಾನು ನೋಡಿಲ್ಲ ಮತ್ತು ಅದರ ನಂಬರ ನನಗೆ ಗೊತ್ತಿಲ್ಲ. ಅಫಘಾತದ ವಿಷಯವಾಗಿ ಪೋಲಿಸರು ನನ್ನ ವಿಚಾರಣೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಭಾಗಶ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು).**

**ಪಾಟೀಸವಾಲುಃ ಎ.ಪಿ.ಪಿ. ರವರಿಂದಃ**

ನಾವು ಕಾರ್ಯಕ್ರಮ ಮುಗಿಸಿಕೊಂಡು ವಾಪಸ್ ಬರುವಾಗ ಸಾಯಂಕಾಲ 4.30 ಗಂಟೆ ಸುಮಾರಿಗೆ ನಾನು ಚಾ ಸಾ 1,4 ರವರು ರಸ್ತೆ ಬದಿಯಿಂದ ಬರುತ್ತಿದ್ದಾಗ ಕಾರಿನ ಚಾಲಕ ತನ್ನ ವಾಹನವನ್ನು ಅತೀ ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಹಿಂದೆಯಿಂದ ಡಿಕ್ಕಿಪಡಿಸಿ ಅಪಘಾತ ಮಾಡಿರುತ್ತಾರೆ ಎಂದರೆ ಸರಿ. ಕಾರ ಚಾಲಕನ ಹೆಸರು ಮಲ್ಲಿಕಾರ್ಜುನ ಬಿರಾದಾರ ಕಾರ ನಂಬರ ನಂಬರ ಕೆಎ/28/ಝಡ್ 4186 ಎಂದು ನಮಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ಪೋಲಿಸರು ನನ್ನ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ದಿ 27-08-2022 ರಂದು ಪೋಲಿಸರು ನನ್ನ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನೀರಾಕಾರಿಸಿದ ಹೇಳಿಕೆ ಭಾಗವನ್ನು ನಿಪಿ 6 ಎಂದು ಗುರುತಿಸಲಾಯಿತು. ನಿಪಿ 6 ರಂತೆ ಹೇಳಿಕೆ ನೀಡಿರುತ್ತೆನೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಬಿ ಜಿ ಎನ್ ವಕೀಲರಿಂದ**

ಚಾ ಸಾ 4 ರವರು ಮಧ್ಯಪಾನ ಸೇವನೆ ಮಾಡಿದ್ದರು ಎಂದರೆ ಸರಿಯಲ್ಲ. ಬಸ್ ನಿಲ್ದಾಣ ಹತ್ತಿರ ಸಾಕಷ್ಟು ಜನದಟ್ಟಣೆ ಇರುತ್ತದೆ ಎಂದರೆ ಸರಿ. ಹಾಗಾಗಿ ವಾಹನಗಳು ವೇಗವಾಗಿ ಚಲಾವಣೆ ಮಾಡುವುದಿಲ್ಲ ಎಂದರೆ ಸರಿ. ಹಾಗಾಗಿ ಅಪಘಾತಪಡಿಸಿದ ವಾಹನವು ಸಹ ವೇಗವಾಗಿ ಬಂದಿರುವುದಿಲ್ಲ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡದೆ ಸುಮ್ಮನೆ ನಿಂತಿರುತ್ತಾರೆ. ಅಪಘಾತವಾದ ನಂತರ ನಾನು ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸರಿ. ಸದರಿ ಅಪಘಾತದಲ್ಲಿ ಕಾರಿನ ಚಾಲಕನ ತಪ್ಪು ಇರುವುದಿಲ್ಲ ಎಂದು ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.